
ಕವಿತೆ



ಎಂ.ಎಸ್. ಮೂರ್ತಿ
ಕಲೆ: ಮುರಳೀಧರ್ ರಾಥೋಡ್

# ಪಿಕಾಸೊ



ಕಾದ ಪಿಕಾಸಿ
ತಲೆಗೆ ಹೊಡೆದಂತೆ
ಕುಂಚ ಬಿಸಿ ಬಿಸಿ ಬೀಸುಗಳು
ಕುಂಭ ಕುಚ, ಹೂ ದಾನಿ, ಯೋನಿ,
ನಿತಂಬಗಳೆನ್ನದೆ ವಿಕೃತಗೊಳಿಸಿದ
ಉಡಾಳ, ಕುಚ, ಕುಂಚ ವ್ಯಸನಿ
ರೊಚ್ಚಿಗೆದ್ದ ಕಲಾ ಸಾಮ್ರಾಜ್ಯಶಾಹಿ

ವಿಕೃತಿಯೇ ನಿನ್ನ ಸುಕೃತಿ
ಒಪ್ಪ ಜೋಡಿಸಿದ್ದ ಭಿತ್ತಿಯೊಳಗಿನದೆಲ್ಲ
ಹೊರ ಚೆಲ್ಲಿ ಜೋಡಿಸಲಾಗದೆ ಬಿಟ್ಟೆ
ಜನ ಕಣ್ಣೋಟ ಚಿತ್ರ ಕಾಣಲಾರದೆಂದವರ
ಕೊಸರು, ಉಸುರುವ ಮುಂಚೆ ನೀನೇ
ರಾಚಿಸಿದ ರಣರಂಗ ವ್ಯೂಹದಲಿ ದೃಶ್ಯದುನ್ಮಾದ
ಥಳುಕು ಸೃಷ್ಟಿಸಿದ ರಣಭಂಡ ಧೀರ
ಈ ಕಾಲಕೆ ನೀನೇ ಕಲಾ ಕುಲಥಿಲಕ ಶೂರ

ನೋಡುತ್ತಲೇ ಇರಿ
ಹಾಗೇ, ಇದು ಚಿತ್ರವಲ್ಲ! ಬದುಕು
ನೋಡಿ ದಣಿದವರ ಹುಳಿ ತೇಗು,
ಅಜೀರ್ಣವೆಲ್ಲ ಹೊರಗೆ ವಿಸರ್ಜನೆ
ನಿನಗೆ ನೀನು ಕಳೆದು
ನಿರಾಳದೊಳಗೆ ಮುಳುಗಿ ಭಗ್ನ
ಸುಂದರಿ ಒಳಪದರ
ಹುಡುಕುವ ಚಪಲಚಿತ್ತ ಮುದಿ ರಸಿಕ
ನೀನೊಬ್ಬ ಹಸಿ ಬಣ್ಣಗಳ ಕಾಮಿ